**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ**

**ಪ್ರಶ್ನೆ:**

ಕರ್ನಾಟಕದಲ್ಲಿ ಕನ್ನಡದ ಭಾಷೆ ನೆಲ ಜಲ ಸಂರಕ್ಷಣೆಗೆ ಹಲವಾರು ಸಂಘಟನೆಗಳು ಹಲವಾರು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿವೆ. ಭಾಷಾ ರಾಜ್ಯದ ರಚನೆಯ ಹೋರಾಟದಿಂದ ಹಿಡಿದು ಇಲ್ಲಿಯವರೆಗೆ ಕರ್ನಾಟಕದ ನವ ನಿರ್ಮಾಣದವರೆಗೆ ಕನ್ನಡ ಉಳಿಸಲು ಬೆಳಸಲು ನಿರಂತರವಾಗಿ ಹಲವಾರು ಜನ ಮತ್ತು ಸಂಘಟನೆಗಳು ಕೆಲಸ ಮಾಡುತ್ತಿವೆ. ಇಂತಹ ಸಂಘಟನೆಗಳಿಗೆ ಸ್ಫೂರ್ತಿದಾಯಕವಾಗಿ ಎಲ್ಲ ರೀತಿಯ ಸಹಕಾರ ಮತ್ತು ಬೆಂಬಲ ನೀಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಕನ್ನಡ ಚಳುವಳಿಗಳ ನಾಯಕರಾದ ವಾಟಾಳ್ ನಾಗರಾಜ್, ಕರ್ನಾಟಕ ರಕ್ಷಣಾ ವೇದಿಕೆಯ ಟಿ. ಎ. ನಾರಾಯಣಗೌಡ, ಪ್ರವೀಣ್ ಕುಮಾರ್ ಶೆಟ್ಟಿ, ಶಿವರಾಮೇಗೌಡ, ಕನ್ನಡ ಹೋರಾಟಗಾರರಾದ ಸಾ. ರಾ. ಗೋವಿಂದು, ಜಿ. ನಾರಾಯಣ ಕುಮಾರ್ ರವರ ಪುತ್ರರಾದ ಗುರುಪ್ರಸಾದ್ ಹೀಗೆ ಹತ್ತಾರು ಜನರು ಕನ್ನಡದ ನೆಲ ಜಲ ಭಾಷೆಗಾಗಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಕರ್ನಾಟಕದಲ್ಲಿ 150ಕ್ಕೂ ಹೆಚ್ಚು ಕನ್ನಡ ಪರ ಸಂಘಟನೆಗಳು ತಮ್ಮ ತನು ಮನ ಧನ ಅರ್ಪಿಸಿ ಈ ರಾಜ್ಯದ ನೆಲ ಜಲ ಭಾಷೆಯ ಸಂರಕ್ಷಣೆಗಾಗಿ ತಮ್ಮನ್ನು ಅರ್ಪಿಸಿಕೊಂಡಿರುತ್ತಾರೆ. ಕನ್ನಡ ಚಳುವಳಿ ಕೇಂದ್ರ, ಕರ್ನಾಟಕ ರಕ್ಷಣಾ ವೇದಿಕೆ, ಕಲ್ಯಾಣ ಕರ್ನಾಟಕದ ರಕ್ಷಣಾ ವೇದಿಕೆ, ಕನ್ನಡ ಸಂಘಟನೆಗಳ ಒಕ್ಕೂಟ, ಹೊಯ್ಸಳ ಕರ್ನಾಟಕ ಸಂಘ, ಕನ್ನಡ ಸೇನೆ, ಕರುನಾಡ ಸೇನೆ, ಕುವೆಂಪು ಕಲಾನಿಕೇತನ ಕನ್ನಡ ಜಾಗೃತಿ ವೇದಿಕೆ ಹೀಗೆ ಹತ್ತು ಹಲವಾರು ಸಂಘಟನೆಗಳು ಕನ್ನಡ ಭಾಷೆ ಕಟ್ಟುವಲ್ಲಿ ತಮ್ಮನ್ನು ಅರ್ಪಿಸಿಕೊಂಡಿರುತ್ತವೆ. ಕರ್ನಾಟಕದ ನಮ್ಮೆಲ್ಲರ ಗೌರವದ ಸಂಕೇತವಾದ ಕನ್ನಡ ಸಾಹಿತ್ಯ ಪರಿಷತ್ತು ಸಹಿತವಾಗಿ ಅನೇಕ ಜನಪರ ಸಂಘಟನೆಗಳು ಕನ್ನಡದ ಪರವಾಗಿ ನಿರಂತರ ಹೋರಾಟ ಮಾಡುತ್ತಿವೆ. ಕರ್ನಾಟಕದಲ್ಲಿ ಕನ್ನಡ ಹೋರಾಟಗಾರರು ಮತ್ತು ಕನ್ನಡ ಸಂಘಟನೆಗಳು ಬಲಿಷ್ಠಗೊಂಡರೆ ಬಲಿಷ್ಠ ಕರ್ನಾಟಕವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಕರ್ನಾಟಕದ ನೆಲ ಜಲ ಭಾಷೆಯ ಸಂರಕ್ಷಣೆಗೆ ಇದರಿಂದ ಬೆಂಬಲ ನೀಡಿದಂತೆ ಆಗುತ್ತದೆ. ಕನ್ನಡ ಪರ ಹೋರಾಟಗಾರರಿಗೆ ಮತ್ತು ಸಂಘಟನೆಗಳಿಗೆ ಎಲ್ಲ ರೀತಿಯ ಸಹಕಾರ ಮತ್ತು ಆರ್ಥಿಕ ಬೆಂಬಲ ನೀಡುವುದು ಕರ್ನಾಟಕ ರಾಜ್ಯ ಸರ್ಕಾರದ ಆದ್ಯತೆ ಮತ್ತು ಕರ್ತವ್ಯ ಆಗಬೇಕಾಗುತ್ತದೆ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಕರ್ನಾಟಕ ರಾಜ್ಯ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಇಂತಹ ಸಂಘಟನೆಗಳಿಗೆ ಬೆಂಗಳೂರು ಆಡಳಿತ ಕೇಂದ್ರದಿಂದ ಹಿಡಿದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅವುಗಳಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು, ನಿವೇಶನ ಹೊಂದಲು ಮತ್ತು ಕನ್ನಡ ಪರ ಚಳುವಳಿಗಳನ್ನು ಮಾಡಲು ಒಂದು ನೀತಿಯನ್ನು ರೂಪಿಸಿ ಇಂತಹ ಸಂಘಟನೆಗಳಿಗೆ ವಾರ್ಷಿಕ ಅನುದಾನ ಮತ್ತು ಸಹಾಯಧನವನ್ನು ಒದಗಿಸಲು ನೀತಿಯನ್ನು ರೂಪಿಸಿ ಸರ್ಕಾರದ ಆದೇಶವನ್ನು ಮಾಡಬೇಕೆಂದು ಸಾರ್ವಜನಿಕ ದೃಷ್ಟಿಯಿಂದ ಕರ್ನಾಟಕ ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಈ ಸದನದ ಮೂಲಕ ಶೂನ್ಯ ವೇಳೆಯಲ್ಲಿ ಮನವಿ ಮಾಡಲು ಬಯಸುತ್ತೇನೆ.

**ಹೇಳಿಕೆ:**

ಕನ್ನಡದ ಭಾಷೆ ನೆಲ ಜಲ ಸಂರಕ್ಷಣೆಗೆ ಹಲವಾರು ಸಂಘಟನೆಗಳು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿವೆ. ಇವು ಶಾಶ್ವತ ಅನುದಾನಿತ ಸಂಸ್ಥೆಗಳಾಗಿರುವುದಿಲ್ಲ. ಸಂಘ-ಸಂಸ್ಥೆಗಳು ಅನುದಾನ ಕೋರಿದಾಗ ಪರಿಶೀಲಿಸಿ ನಂತರ ಅನುದಾನ ಮಂಜೂರು ಮಾಡಲಾಗುತ್ತದೆ. ಆದರೆ ಹೋರಾಟ ಮಾಡುವ ಸಂಘ-ಸಂಸ್ಥೆಗಳಿಗೆ ಭೂಮಿ ಮಂಜೂರು ಮಾಡುವ ಯೋಜನೆಯು ಇಲಾಖೆಯ ನಿಯಮಾವಳಿಗಳನ್ವಯ ಅನ್ವಯವಾಗುವುದಿಲ್ಲ.

2

ಶ್ರೀ ವಾಟಾಳ್ ನಾಗರಾಜ್ ಅವರು ಕನ್ನಡ ರಾಜ್ಯೋತ್ಸವ ಸಮಿತಿಯ ವತಿಯಿಂದ ಪ್ರತಿ ವರ್ಷ ಆಯೋಜಿಸುವ ರಾಜ್ಯೋತ್ಸವ ಸಮಾರಂಭಕ್ಕೆ ಸದರಿಯವರ ಕೋರಿಕೆಯ ಮೇರೆಗೆ ಪರಿಶೀಲಿಸಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಸಂಸ್ಥೆಯ ವತಿಯಿಂದ 2024ನೇ ಸಾಲಿನಲ್ಲಿ ಆಯೋಜಿಸಿರುವ 62ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭಕ್ಕೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 381 ಕಸಧ 2025, ದಿನಾಂಕ:11.11.2025ರನ್ವಯ ರೂ. 1.00 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ಶ್ರೀ ಟಿ. ಎ. ನಾರಾಯಣಗೌಡರು, ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ ಇವರ ಕೋರಿಕೆಯ ಮೇರೆಗೆ ಪರಿಶೀಲಿಸಿ, ಸಂಸ್ಥೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಆಯೋಜಿಸಿರುವ "ಕರ್ನಾಟಕ ಜನಪದರ ಮಹಾಸಂಗಮ, ಸಂಭ್ರಮ" ಕಾರ್ಯಕ್ರಮಕ್ಕೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 259 ಕಸಧ 2025 ದಿನಾಂಕ:21.08.2025ರನ್ವಯ ರೂ.15.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ರಾಜ್ಯಾದ್ಯಂತ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಅರ್ಹ ಸಂಘ-ಸಂಸ್ಥೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 280 ಕಸಧ 2024(ಭಾಗ-1), ದಿನಾಂಕ:31.10.2025ರಲ್ಲಿ ರೂಪಿಸಿರುವ ಧನಸಹಾಯ ಮಾರ್ಗಸೂಚಿಯನ್ವಯ ಧನಸಹಾಯ ನೀಡಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಸೇವಾಸಿಂಧು ಮುಖಾಂತರ ದಿನಾಂಕ: 01.12.2025 ರಿಂದ 30.12.2025 ರವರೆಗೆ ಕಾಲಾವಕಾಶ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಖ್ಯೆ: ಕಸಂವಾ 128 ಕವಿಸ 2025

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು
ಕನ್ನಡ ಮತ್ತು ಸಂಸ್ಕೃತಿ ಸಚಿವರು.